ನಿನ್ ಸುದ್ದಿ ಗೊತ್ತಿಲ್ಲೇನು?''

ಗೊತ್ತಿಲ್ಲ ಅನ್ನುವಂಗ ತಲೆ ಅಡ್ಡಡ್ಡ ಆಡಿಸಿದ್ಲು ಪದ್ಮ.

''ಅಮ್ಮಗ ಅನುಮಾನ ಇದ್ದಂಗೈತಿ. ಗೋವಾದಾಗ ಕೆಲ್ಸಕ್ಕ ಸೇರೀನಿ ಅಂತ ಹೇಳೀನಿ. ಆವಾಗಾವಾಗ ಆಕೀಗೆ ರೊಕ್ಕ ಕಳಿಸ್ತಿರತೀನಿ. ಆದ್ರ ವೂರು ಬುಟ್ಟಾಗಿಂದ ತುರಕಟ್ಟೆಗೆ ಮತ್ತ ಹೋಗಿಲ್ಲ.''

''ಮತ್ತೆ ಈಗ್ ಹೋಗಿ ಏನ್ಮಾಡ್ತೀ?''

''ಅಮ್ಮನ್ನ ನೋಡ್ಬೇಕು ಅನಿಸಾಕತ್ತ್ಯಾದ. ಆಕೀಗಿ ಸ್ವಲ್ಪ ರೊಕ್ಕ ಕೊಟ್ಟು ಅಲ್ಲಿಂದ ಹೋಗ್ಬಿಡ್ತೀನಿ.''

''ಅದೇ... ಎಲ್ಲಿಗೆ ಅಂತ?''

ಆಕಿ ಮಾತಾಡ್ಲಿಲ್ಲ.

ಮತ್ತೆ ಕೇಳಿದ ಎಸ್ಸೆ.

ಆತನ ಕಣ್ಣಿನ್ಯಾಗ ಕಣ್ಣಿಟ್ಟು ಮೆಲ್ಲಕ ಹೇಳಿದ್ಲು... ಆದ್ರೆ ಬಿಂದಾಸ್ ಹೇಳಿದ್ಲು...

''ಇರುಪಾಪುರ ಗಡ್ಡಿ.''

★★★

ಆ ಇಬ್ಬರು ಹುಡುಗೀರು ಹೊಲದಾಗಿನ ದಿಬ್ಬದ ಮ್ಯಾಗ ಕುಂತುಗಂಡು ಮಾತಾಡಾಕತ್ತ್ಯಾರ. ಸುಡ್ ಸುಡಾ ವಗ್ಗಾಣಿ–ಮಿರ್ಚಿ ಪೂಡ ಬಿಚ್ಚಿ ಮಾತಾಡಿಕೆಂತ ತಿನ್ನಾಕತ್ತ್ಯಾರ. ಹಸರು ಸೀರೆ ಉಟಗಂಡು ಸೀಮಂತಕ್ಕೆ ಸಜ್ಜಾಗಿ ಕುಂತಗಂಡ ಚೊಚ್ಚಲ ಬಸುರಿಯಂಗ ಕಾಣಿಸಾಕತ್ತ್ಯಾದ ಹೊಲ. ಪೈರಿನ ಸಂದಿಗಳಿಂದ ತೂರಿಕೆಂಡು ಬರಾಕತ್ತಿದ್ರಿಂದನೋ ಏನೋ, ಗವ್ವಂತ ಇವರ ಮುಖಕ್ಕೆ ಚಳಿಗಾಳಿ ಹೊಡ್ಯಾಕತ್ತ್ಯಾದ.

''ಪದ್ದೂ... ಈ ಡ್ರೆಸ್‌ನ್ಯಾಗ ನೀನು ಭಾಳ ಚಂದ ಕಾಣಕತ್ತೀದಿ ನೋಡು... ಸಿನಿಮಾದಾಗ ಸೇರಿಕೆಂಬುಡು'' ಮೆಲ್ಲಕ ಉಸುರಿದ್ಲು ದುರ್ಗಿ.

ಆಕಿ ಮಾತು ಕೇಳಿ ಗಟ್ಟಿಯಾಗಿ ನಕ್ಕಿದ್ಲು ಪದ್ಮ.

''ನಮ್ಮಪ್ಪ ಕಾಲು ಮುರ್ದು ಮೂಲ್ಯಾಗ ಕುಂಡ್ರುಸ್ತಾನ.''

ಈ ಮಾತಿಗೆ ಇಬ್ರೂ ಒಂದೇಸಮ ನಕ್ಕಿದ್ರು.

''ಅದೇನೋ ಗೊತ್ತಿಲ್ಲವ್ವಾ... ನೀನು ಹೀರೋಯಿನ್ ಕಂಡಂಗ ಕಾಣ್ತೀಯಂತ...'' ಈ ಸಲ ಪದ್ಮಳ ಕುಂಡಿ ಚೂಟಿ ಅಣಿಕಿಸಿದ್ಲು ದುರ್ಗಿ.

''ಯಾವನೌನು ಹೇಳಿದ್ದು?''

''ಯಾರೋ ಹೇಳಿದ್ರು ಬಿಡು... ಅವನ ಹೆಸ್ರು ಯಾಕ?''

''ಅಲ್ಲಾ... ನನ್ನ ಹೀರೋಯಿನ್ ಅಂದ ಆ ಬಾಡ್ಯಾ ಯಾರಂತ.''

''ಹಂಗನಬ್ಯಾಡ... ಅವ್ನು ಬಾಡ್ಯಾ ಏನಲ್ಲ.''

ಅಷ್ಟೊತ್ತಿಗೆ ಅವ್ನು ಯಾರ್ ಅನ್ನಾದು ಪದ್ಮಳಿಗೆ ಅರ್ಥ ಆಗಿದ್ರುಗುಡ, ಯಾರು ಅನ್ನಂಗ ಮುಖ ಇಟ್ಟು ದುರ್ಗಿಳ ಕಡೆ ನೋಡಿದ್ಲು.

''ಅದೇ... ಆ ರಾಂಬಾಬು... ಅರಗಿನಮರ ಕ್ಯಾಂಪಿನೌನು. ಬಸ್ಸಿನ್ಯಾಗ ನಿನ್ ಹಿಂದಾ ನಿಂತಗಂತನಲ್ಲಾ. ಕಾಲೇಜ್ ಹತ್ರ ಇಳ್ದಾಗ ನಾಯಿ ಬಂದಂಗ ನಿನ್ ಹಿಂದ್‌ಹಿಂದಾ ಬರಂಗಿಲ್ಲೇನು ಅವ್ನೇ. ನಿನ್ನ ಭಾಳ ಹಚ್ಚಿಗೆಂಡಾನಂತ.''

ದುರ್ಗಿ ಅವನ ಪರವಾಗಿ ಮಾತಾಡಾಕತ್ತಿದ್ಲು.

ದಿನಾ ತುರಕಟ್ಯಾಗ ಪದ್ಮ ಬಸ್ ಹತಿಗೆಂತ್ಯಾಳ. ಅವನು ಅರಗಿನಮರ ಕ್ಯಾಂಪಿನ್ಯಾಗ ಹತಿಗೆಂತನ. ಆಕಿ ಮುಂದ. ಅವ್ನು ಹಿಂದ. ದಿನಾ ಸಿಂಧನೂರಿನ ಕಾಲೇಜಿಗೆ ಹೋಗಾದು ಬರಾದು ನಡದಿತ್ತು. ಆದ್ರೆ